**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-02**

ಸಂಖ್ಯೆ: ಸಿ7(2)/ಪ್ರಾ.ಶಿ.ಅ/ಪೂ.ಪ್ರಾ 315/2015-16 ದಿನಾಂಕ: 05-11-2016

***ಸುತ್ತೋಲೆ***

ವಿಷಯ: ಖಾಸಗಿ ಪೂರ್ವ ಪ್ರಾಥಮಿಕ ಶಾಲೆಗಳ ನೋಂದಣಿ ಕುರಿತು.

ಉಲ್ಲೇಖ: 1] ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 512 ಪಿಜಿಸಿ 2015 ದಿನಾಂಕ: 18-01-2016 ಮತ್ತು 25-07-2016.

2] ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 617 ಪಿಜಿಸಿ 2015 ದಿನಾಂಕ: 23-12-2015.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-1ರ ಸರ್ಕಾರದ ಅಧಿಸೂಚನೆಯಲ್ಲಿ ಖಾಸಗಿ ಪೂರ್ವ ಪ್ರಾಥಮಿಕ ಶಾಲೆಗಳ ನೋಂದಣಿ ಕುರಿತು ಮಾರ್ಗ ಸೂಚಿಗಳನ್ನು ಹೊರಡಿಸಲಾಗಿದೆ. ಖಾಸಗಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ಹೊಸದಾಗಿ ನೋಂದಣಿ ಪಡೆಯಲು ಉದ್ದೇಶಿತ ಶಾಲಾ ಆಡಳಿತ ಮಂಡಳಿಗಳು ಸಕಾಲ ವ್ಯಾಪ್ತಿಗೆ ಒಳಪಟ್ಟು, ಇಲಾಖೆಯು ಸಿದ್ಧ ಪಡಿಸಿರುವ ಆನ್‌ಲೈನ್ ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಉಲ್ಲೇಖ [2]ರ ಅಧಿಸೂಚನೆಯ ಪ್ರಕಾರ ಸಕ್ಷಮ ಪ್ರಾಧಿಕಾರಿಗಳಾದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಅರ್ಜಿ ಸ್ವೀಕೃತಗೊಂಡ 03 ತಿಂಗಳ ಕಾಲಮಿತಿಯೊಳಗಾಗಿ ಉಲ್ಲೇಖ [1}ರ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಅಂಶಗಳ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ತಂತ್ರಾಂಶದ ಮೂಲಕವೇ ಇತ್ಯರ್ಥ ಪಡಿಸಬೇಕಾಗುತ್ತದೆ.

ದಿನಾಂಕ: 24-10-2016ರ ಮಾಹಿತಿಯ ಪ್ರಕಾರ ರಾಜ್ಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿ 1321 ಪ್ರಸ್ತಾವನೆಗಳು ಆನ್‌ಲೈನ್ ತಂತ್ರಾಂಶದಲ್ಲಿ ಬಾಕಿ ಇರುವುದು ದೃಢಪಟ್ಟಿರುತ್ತದೆ.

ಆದುದರಿಂದ ಈ ಸಂಬಂಧ ನೋಂದಣಿ ಪ್ರಾಧಿಕಾರಿಗಳಾದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಬಾಕಿ ಇರುವ ಪೂರ್ವ ಪ್ರಾಥಮಿಕ ಶಾಲೆಯ ಪ್ರಸ್ತಾವನೆಗಳನ್ನು ಆನ್‌ಲೈನ್ ತಂತ್ರಾಂಶದ ಮೂಲಕ ದಿನಾಂಕ: 30-11-2016ರೊಳಗಾಗಿ ಇತ್ಯರ್ಥ ಪಡಿಸಿ ಅನುಪಾಲನಾ ವರದಿಯನ್ನು ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ರವರಿಗೆ ಸಲ್ಲಿಸುವಂತೆ ತಿಳಿಸಿದೆ.

(ಸೌಜನ್ಯ ಭಾ.ಆ.ಸೇ)
ಆಯುಕ್ತರು
5/11/16

**ಗೆ:**

ರಾಜ್ಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ತ್ವರಿತ ಕ್ರಮಕ್ಕಾಗಿ.

**ಪ್ರತಿಯನ್ನು:**

1] ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರಗಿ ವಿಭಾಗ ಇವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
2]ರಾಜ್ಯ ಎಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
3]ಕಛೇರಿ ಪ್ರತಿ.